4001/5048/6016/7016

**I Semester 3 Year LL.B./III Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, October/November 2021**

**CONSTITUTIONAL LAW – I**

Duration : 3 Hours Max. Marks : 80

**Instructions :** **1. Answer any five questions from group (a) each question carries 10 marks.**

**2. Answer any five questions from group (b) each question carries 6 marks.**

**3. Answer should be written either in English or Kannada completely.**

Q. No. 1. a) Explain the salient features of Indian Constitution. Marks : 10

ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿರಿ.

Q. No. 1. b) Preamble. Marks : 6

ಪ್ರಸ್ತಾವನೆ.

Q. No. 2. a) Critically examine the federal characters of the Indian Constitution. Marks : 10

ಭಾರತ ಸಂವಿಧಾನದ ಸಂಯುಕ್ತತೆಯ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

Q. No. 2. b) Kinds of Constitution. Marks : 6

ಸಂವಿಧಾನದ ವಿವಿಧ ಪ್ರಕಾರಗಳು.

Q. No. 3. a) Does Article 14 permit classification ? If so, discuss the basis of classification. Marks : 10

ಅನುಚ್ಛೇದ 14 ವರ್ಗೀಕರಣಕ್ಕೆ ಅವಕಾಶ ಕೊಡುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರಗಳ ಮೇಲೆ ಎಂಬುದನ್ನು ಚರ್ಚಿಸಿರಿ.

Q. No. 3. b) Write a note on ‘Doctrine of Severability’. Marks : 6

‘ಬೇರ್ಪಡಿಸುವ ಸಿದ್ಧಾಂತ’ದ ಬಗ್ಗೆ ಟಿಪ್ಪಣಿ ಬರೆಯಿರಿ.

P.T.O.

Q. No. 4. a) Examine the scope of "Other authorities" under Article 12 of the Constitution. Marks : 10

ಸಂವಿಧಾನದ ಅನುಚ್ಛೇದ 12ರಲ್ಲಿನ ''ಇತರ ಪ್ರಾಧಿಕಾರಗಳು'' ಎಂಬುದರ ವ್ಯಾಪ್ತಿಯನ್ನು ಪರಿಶೀಲಿಸಿ.

Q. No. 4. b) Is University a "State" under Article 12 ? Marks : 6

ಅನುಚ್ಛೇದ 12ರ ಅಡಿ ವಿಶ್ವವಿದ್ಯಾಲಯ ರಾಜ್ಯವೇ ?

Q. No. 5. a) "Article 15(4) provides for the advancement of socially and educationally backward classes of citizens." Discuss with cases. Marks : 10

''ಅನುಚ್ಛೇದ 15(4) ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪೌರ ವರ್ಗಗಳ ಅಭಿವೃದ್ಧಿಗಾಗಿ ಅವಕಾಶ ಮಾಡಿಕೊಡುತ್ತದೆ.'' ತೀರ್ಮಾನಿತ ಪ್ರಕರಣಗಳೊಂದಿಗೆ ಈ ಹೇಳಿಕೆಯನ್ನು ಚರ್ಚಿಸಿ.

Q. No. 5. b) A non-resident of Karnataka complains that he has to pay a greater capitation fee for admission to medical college in Karnataka. Is this complain justified ? Marks : 6

ಕರ್ನಾಟಕ ಅನಿವಾಸಿಯು ಕರ್ನಾಟಕದ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಹೆಚ್ಚಿನ ಕ್ಯಾಪಿಟೇಶನ್ ಶುಲ್ಕ ನೀಡಬೇಕೆಂದು ದೂರುತ್ತಿದ್ದಾನೆ. ಈ ದೂರು ನ್ಯಾಯಬದ್ಧವೇ ?

Q. No. 6. a) Discuss the right to freedom of profession, occupation, trade or business under Article 19(1)(g) of Indian Constitution. Marks : 10

ಭಾರತದ ಸಂವಿಧಾನದ ಅನುಚ್ಛೇದ 19(1)(g)ಯ ಪ್ರಕಾರ ವೃತ್ತಿ, ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಸ್ವಾತಂತ್ರ್ಯದ ಹಕ್ಕಿನ ಬಗ್ಗೆ ವಿವರಿಸಿರಿ.

Q. No. 6. b) Write a note on untouchability. Marks : 6

ಅಸ್ಪೃಶ್ಯತೆ ಬಗ್ಗೆ ಟಿಪ್ಪಣಿ ಬರೆಯಿರಿ.

Q. No. 7. a) Explain the safeguards available against the arbitrary arrest and detention. Marks : 10

ಸ್ವೇಚ್ಛಾನುಸಾರ ದಸ್ತಗಿರಿ ಮತ್ತು ಬಂಧನದ ವಿರುದ್ಧ ಇರುವ ರಕ್ಷಣೆಗಳನ್ನು ವಿವರಿಸಿರಿ.

Q. No. 7. b) Authorities have refused to issue passport to 'A', a citizen of India to go abroad. Can the authorities be compelled to issue ? Marks : 6

ಪ್ರಾಧಿಕಾರವು 'ಎ' ಎಂಬ ಭಾರತೀಯ ನಾಗರಿಕನಿಗೆ ವಿದೇಶ ಪ್ರವಾಸ ಪತ್ರವನ್ನು ಕೊಡಲು ನಿರಾಕರಿಸಿದೆ. ಪ್ರಾಧಿಕಾರವು ಈ ಪತ್ರವನ್ನು ನೀಡಲೇಬೇಕೆಂದು ಒತ್ತಾಯಿಸಬಹುದೇ ?

Q. No. 8. a) Briefly explain the right to freedom of religion under Indian Constitution. Marks : 10

ಭಾರತದ ಸಂವಿಧಾನದಲ್ಲಿ ಇರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 8. b) An accused was compelled by police authorities to accept that he committed an offence under a law. Does it amount to violation of his fundamental right ? Decide. Marks : 6

ಒಬ್ಬ ಆರೋಪಿಯನ್ನು ಕಾನೂನಿನ ಅಡಿಯಲ್ಲಿ ಅಪರಾಧ ಮಾಡಿರುವುದನ್ನು ಒಪ್ಪಿಕೊಳ್ಳಲು ಪೋಲೀಸ್ ಅಧಿಕಾರಿಗಳು ಒತ್ತಡ ಹೇರುತ್ತಾರೆ. ಇದು ಅವನ ಮೂಲಭೂತ ಹಕ್ಕಿನ ಉಲ್ಲಂಘನೆಯೇ ? ನಿರ್ಧರಿಸಿರಿ.

Q. No. 9. a) State the nature and scope of rights of minorities to establish and administer educational institutions. Marks : 10

ಅಲ್ಪಸಂಖ್ಯಾತರಿಗೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ನಿರ್ವಹಣೆಯ ಹಕ್ಕಿನ ಸ್ವರೂಪ ಹಾಗೂ ವ್ಯಾಪ್ತಿಯನ್ನು ಹೇಳಿರಿ.

Q. No. 9. b) Write a note on writ of Mandamus. Marks : 6

ಮ್ಯಾಂಡಮಸ್ ರಿಟ್ ಕುರಿತು ಟಿಪ್ಪಣಿ ಬರೆಯಿರಿ.

Q. No. 10. a) Discuss the importance of Directive Principles of State Policy. Explain its relation to Fundamental Rights. Marks : 10

ರಾಜ್ಯ ನೀತಿಯ ನಿರ್ದೇಶನಾತ್ಮಕ ತತ್ವಗಳ ಮಹತ್ವವನ್ನು ಚರ್ಚಿಸಿರಿ. ಮೂಲಭೂತ ಹಕ್ಕುಗಳೊಂದಿಗೆ ಇರುವ ಇವುಗಳ ಸಂಬಂಧವನ್ನು ವಿವರಿಸಿ.

Q. No. 10. b) The Government of Karnataka acquired the land of 'B' by law. 'B' wants to challenge the acquisition of property by way of writ under Article 32 of the Indian Constitution. Can 'B' succeed ? Marks : 6

ಕರ್ನಾಟಕ ಸರಕಾರವು ಸೂಕ್ತ ಕಾನೂನಿನ ಮೂಲಕ 'B'ಯ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುತ್ತದೆ. 'B'ಯು ಭಾರತದ ಸಂವಿಧಾನದ ಅನುಚ್ಛೇದ 32 ರಲ್ಲಿ ರಿಟ್ ಮೂಲಕ ಭೂಸ್ವಾಧೀನವನ್ನು ಪ್ರಶ್ನಿಸಲು ಇಚ್ಛಿಸುತ್ತಾನೆ. 'B'ಯು ಗೆಲ್ಲುವನೇ ?

# I Semester 3 Year LL.B. Examination, April/May 2022 (Dec. 2021)
## CONSTITUTIONAL LAW – I

Duration : 3 Hours Max. Marks : 80

**Instructions : 1. Answer all five Units.**
**2. One essay type question and one short note/problems is compulsory from each Unit.**
**3. Figures to the right indicate marks.**
**4. Answers should be written either in English or Kannada completely.**

UNIT – I

Q. No. 1. a) Explain the law relating to citizenship. Marks : 10
ಪೌರತ್ವದ ಬಗೆಗೆ ಇರುವ ಕಾನೂನುಗಳನ್ನು ವಿವರಿಸಿ.

OR/ಅಥವಾ

Q. No. 1. a) Can the Indian Constitution be labelled as Federal Constitution ? Marks : 10
ಭಾರತದ ಸಂವಿಧಾನವನ್ನು ಸಂಯುಕ್ತ ಸಂವಿಧಾನವೆಂದು ಕರೆಯಬಹುದೇ ?

Q. No. 1. b) Preamble. Marks : 6
ಪ್ರಸ್ತಾವನೆ.

OR/ಅಥವಾ

Q. No. 1. b) Salient features of Indian Constitution. Marks : 6
ಭಾರತದ ಸಂವಿಧಾನದ ವಿಶೇಷ ಲಕ್ಷಣಗಳು.

UNIT – II

Q. No. 2. a) Explain "State" under Art. 12 of the Constitution. Refer to decided cases. Marks : 10
ಸಂವಿಧಾನದ ವಿಧಿ 12 ರ ಪ್ರಕಾರ ''ರಾಜ್ಯ''ವನ್ನು ವಿವರಿಸಿರಿ. ನಿರ್ಣಯಿಸಿದ ತೀರ್ಪುಗಳನ್ನು ಉಲ್ಲೇಖಿಸಿರಿ.

OR/ಅಥವಾ

Q. No. 2. a) Does Art. 14 permit classification ? If so, refer to the basis on which it is permissible. Marks : 10

ಅನುಚ್ಛೇದ 14 ವರ್ಗೀಕರಣಕ್ಕೆ ಅವಕಾಶ ಕೊಡುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರಗಳ ಮೇಲೆ ಎಂಬುದನ್ನು ಉಲ್ಲೇಖಿಸಿ.

Q. No. 2. b) The Air India Regulations provide the conditions of retirement of a Air hostess from the service of Air India either upon attaining the age of 35 years or on marriage if it takes place within four years of service or on first pregnancy whichever occured earlier. Mrs. "N" an air hostess challenges this in the Supreme Court. Decide. Marks : 6

ಭಾರತೀಯ ನಾಗರಿಕ ವಿಮಾನಯಾನದಲ್ಲಿ ಒಬ್ಬ ಏರ್‌ಹೊಸ್ಟೆಸ್‌ಳು (ಗಗನ ಸಖಿ) ಸೇವೆಯಿಂದ ಯಾವಾಗ ನಿವೃತ್ತಿ ಹೊಂದುತ್ತಾಳೆಂಬುದರ ಬಗ್ಗೆ ಅದರ ನಿಯಮಾವಳಿಗಳ ಪ್ರಕಾರ ನಿವೃತ್ತಿಯು 35 ವರ್ಷಗಳಾದ ನಂತರವಾಗಲಿ ಅಥವಾ ಕೆಲಸಕ್ಕೆ ಸೇರಿದ ನಾಲ್ಕು ವರ್ಷಕ್ಕೆ ಪೂರ್ವದಲ್ಲಿಯೇ ಮದುವೆಯಾದಲ್ಲಿ ಅಥವಾ ಅವಳು ಮೊದಲು ಗರ್ಭಿಣಿಯಾದಾಗ ಇದರಲ್ಲಿ ಯಾವುದು ಮೊದಲೋ ಅದರಂತೆ ಅವಳು ನಿವೃತ್ತಿ ಹೊಂದಬೇಕು. "N" ಎಂಬ ಏರ್‌ಹೊಸ್ಟಸ್‌ಳು (ಗಗನ ಸಖಿ) ಈ ನಿಯಮಾವಳಿಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾಳೆ. ನಿರ್ಣಯಿಸಿರಿ.

OR/ಅಥವಾ

Q. No. 2. b) What is the doctrine of Eclipse ? Marks : 6

ಗ್ರಹಣ ಸಿದ್ಧಾಂತವೆಂದರೇನು ?

## UNIT – III

Q. No. 3. a) The Constitution of India provides for protective discrimination under Article 16. Critically examine this statement. Marks : 10

"ಭಾರತೀಯ ಸಂವಿಧಾನವು 16ನೇ ವಿಧಿಯನ್ವಯ ರಕ್ಷಣಾತ್ಮಕ ತಾರತಮ್ಯ"ತಗೆ ಅನುವು ಮಾಡಿಕೊಟ್ಟಿದೆ. ಈ ಹೇಳಿಕೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

OR/ಅಥವಾ

Q. No. 3. a) "All citizens shall have the right to practice any profession or to carry on any occupation, trade or business" Comment. Marks : 10

"ಎಲ್ಲಾ ನಾಗರಿಕರು ಯಾವುದಾದರೂ ವೃತ್ತಿಯನ್ನು ಅಥವಾ ಉಪಜೀವಿಕೆಯನ್ನು, ವ್ಯಾಪಾರವನ್ನು ಅಥವಾ ಉದ್ಯೋಗವನ್ನು ನಡೆಸಲು ಹಕ್ಕುಳ್ಳವರಾಗಿದ್ದಾರೆ" ವಿಮರ್ಶಿಸಿರಿ.

Q. No. 3. b) 'X' a producer of a film applied to the censor board for 'U' certificate but got 'A' certificate as per the Cinematograph Act, he challenges the Act. Decide. Marks : 6

''ಕ್ಷ'' ಎಂಬ ಒಬ್ಬ ಚಲನ ಚಿತ್ರ ನಿರ್ಮಾಪಕನು ಸೆನ್ಸಾರ್ ಬೋರ್ಡಿಗೆ ತನ್ನ ಚಿತ್ರಕ್ಕೆ ''ಯು'' ಸರ್ಟಿಫಿಕೇಟಿಗೆ ಅರ್ಜಿ ಹಾಕಿದನು. ಆದರೆ ''ಯು'' ದ ಬದಲಿ ''ಎ'' ಎಂದು ಅವರ ಚಲನಚಿತ್ರಕ್ಕೆ ಸರ್ಟಿಫಿಕೆಟನ್ನು ಸಿನಿಮಾಟೋಗ್ರಾಫ್ ಶಾಸನದ ಪ್ರಕಾರ ಕೊಡಲಾಯಿತು. ಅವನು ಈ ಶಾಸನವನ್ನು ಪ್ರಶ್ನಿಸುತ್ತಾನೆ. ನಿರ್ಣಯಿಸಿರಿ.

OR/ಅಥವಾ

Q. No. 3. b) Authorities have refused to issue passport to "A", a citizens of India to go abroad. Can the authorities be compelled to issue a passport ? Marks : 6

ಪ್ರಾಧಿಕಾರವು ''ಎ'' ಎಂಬ ಭಾರತೀಯ ನಾಗರಿಕನಿಗೆ ವಿದೇಶ ಪ್ರವಾಸ ಪತ್ರವನ್ನು ನಿರಾಕರಿಸಿದೆ. ಪ್ರಾಧಿಕಾರವು ಈ ಪತ್ರವನ್ನು ನೀಡಲೇಬೇಕೆಂದು ಒತ್ತಾಯಿಸಬಹುದೇ ?

## UNIT – IV

Q. No. 4. a) Explain the constitutional safeguards provided in favour of an accused person. Marks : 10

ಆಪಾದಿತನ ಪರವಾಗಿ ಸಂವಿಧಾನಾತ್ಮಕ ರಕ್ಷಣೆಗಳನ್ನು ವಿವರಿಸಿ.

OR/ಅಥವಾ

Q. No. 4. a) Discuss the scope of the constitutional provisions relating to freedom of religion. Is this freedom consistent with the constitutional ideal of "Secularism" ? Marks : 10

ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ನಿಯಮಗಳ ವ್ಯಾಪ್ತಿಯನ್ನು ಚರ್ಚಿಸಿ. ಈ ಸ್ವಾತಂತ್ರ್ಯ ಸಂವಿಧಾನದ ಆದರ್ಶ ಧ್ಯೇಯವಾದ ''ಜಾತ್ಯತೀತ ಭಾವನೆ'' ಗೆ ಅನುಗುಣವಾಗಿದೆಯೇ ?

Q. No. 4. b) A State Government ordered the domiciliary visits against Mr. 'X'. The police department used to visit the house of Mr 'X' day and night which affected his fundamental rights under Constitution. Mr. 'X' challenges in the Supreme Court. Decide. Marks : 6

ಒಂದು ರಾಜ್ಯ ಸರಕಾರವು ''ಕ್ಷ'' ನ ವಿರುದ್ಧ ಮುನ್ಸೂಚನೆ ಇಲ್ಲದೇ ಮನೆಗೆ ಭೇಟಿ ಕೊಡುವ ಆದೇಶವನ್ನು ಹೊರಡಿಸಿತು. ಆರಕ್ಷಕದಳದವರು ರಾತ್ರಿ ಹಗಲೆನ್ನದೆ ''ಕ್ಷ'' ನ ಮನೆಗೆ ಭೇಟಿ ಕೊಡುವುದರಿಂದ ಸಂವಿಧಾನದ ಪ್ರಕಾರ ಅವನ ಮೂಲಭೂತ ಹಕ್ಕಿಗೆ ಧಕ್ಕೆ ತಂದಂತಾಯಿತು ''ಕ್ಷ'' ನು ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಕ್ರಮವನ್ನು ಪ್ರಶ್ನಿಸುತ್ತಾನೆ. ನಿರ್ಣಯಿಸಿ.

OR/ಅಥವಾ

Q. No. 4. b) The petitioners who were poor hawkers were carrying on business on the pavements of roads of New Delhi. They allege that the Delhi Municipal corporation had permitted them to carry on trade and later on they were refused permission to continue with their trade. So the petitioners challenge the action of the corporation on the ground that their rights under Art. 19(1) (g) and Art. 21 of the Constitution have been violated. Decide. Marks : 6

ಬಡ ಬೀದಿ ವ್ಯಾಪಾರಿಗಳಾದ ಅರ್ಜಿದಾರರು ಹೊಸ ದಿಲ್ಲಿಯ ಬೀದಿಗಳಲ್ಲಿ ವ್ಯಾಪಾರವನ್ನು ಮಾಡುತ್ತಿದ್ದರು. ಅವರ ಪ್ರಕಾರ ದಿಲ್ಲಿ ನಗರಸಭೆಯವರು ವ್ಯಾಪಾರ ಮಾಡಲು ಮೊದಲು ಅನುಮತಿ ಕೊಟ್ಟಿತ್ತು. ಆದರೆ ಕೆಲದಿನಗಳ ನಂತರ ವ್ಯಾಪಾರವನ್ನು ಮುಂದುವರಿಸಲು ತಕರಾರು ಮಾಡಿತು. ನಗರಸಭೆಯ ಈ ಕ್ರಮವನ್ನು ಸಂವಿಧಾನದ ವಿಧಿ 19(1) (g) ಹಾಗೂ ವಿಧಿ 21 ಇವುಗಳ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾರೆ. ನಿರ್ಣಯಿಸಿರಿ.

## UNIT – V

Q. No. 5. a) Describe different kinds of writs. Marks : 10

ವಿವಿಧ ಪ್ರಕಾರದ ರಿಟ್‌ಗಳನ್ನು ವಿವರಿಸಿರಿ.

OR/ಅಥವಾ

Q. No. 5. a) What are the rights of minorities under the Constitution ? Marks : 10

ಸಂವಿಧಾನದಡಿಯಲ್ಲಿ ಅಲ್ಪಸಂಖ್ಯಾತರ ಹಕ್ಕುಗಳಾವುವು ?

Q. No. 5. b) Directive Principles of State Policy. Marks : 6

ರಾಜ್ಯ ನಿರ್ದೇಶಕ ತತ್ವಗಳು.

OR/ಅಥವಾ

Q. No. 5. b) Fundamental Duties. Marks : 6

ಮೂಲಭೂತ ಕರ್ತವ್ಯಗಳು.

**I Semester 3 Yr. LL.B./III Semester of 5 Yrs. B.A.,LL.B.(Maj.-Min.)/ B.B.A.,LL.B./B.Com.,LL.B. Examination, March/April 2021**
**CONSTITUTIONAL LAW – I**

Duration : 3 Hours Max. Marks : 80

**Instructions : 1. Answer any five questions from group (a) each question carries 10 marks.**
**2. Answer any five questions from group (b) each question carries 6 marks.**
**3. Answer should be written either in English or Kannada completely.**

Q. No. 1. a) Define Constitution. What are the different kinds of Constitutions ? Marks : 10

ಸಂವಿಧಾನ ವ್ಯಾಖ್ಯಾನಿಸಿ. ವಿವಿಧ ಬಗೆಯ ಸಂವಿಧಾನಗಳು ಯಾವುವು ?

Q. No. 1. b) Write a short note on termination of citizenship. Marks : 6

ಪೌರತ್ವದ ಮುಕ್ತಾಯದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

Q. No. 2. a) What is Preamble ? What are the objectives and values enshrined in the Preamble ? Marks : 10

ಪ್ರಸ್ತಾವನೆ ಎಂದರೇನು ? ಪ್ರಸ್ತಾವನೆಯಲ್ಲಿ ಪ್ರತಿಷ್ಠಾಪಿಸಲಾದ ಉದ್ದೇಶಗಳು ಮತ್ತು ಮೌಲ್ಯಗಳು ಯಾವುವು ?

Q. No. 2. b) Some foreign nationals came to India for Christian missionary work and stayed in India for more than 5 years immediately before the commencement of the Constitution. They stayed on the basis of foreign passport and residential permit. Can they acquire citizenship by Domicile ? Marks : 6

ಕೆಲವು ವಿದೇಶಿ ಪ್ರಜೆಗಳು ಕ್ರಿಶ್ಚಿಯನ್ ಮಿಷನರಿ ಕೆಲಸಕ್ಕಾಗಿ ಭಾರತಕ್ಕೆ ಬಂದು 5 ವರ್ಷಕ್ಕೂ ಹೆಚ್ಚು ಕಾಲ ಸಂವಿಧಾನದ ಪ್ರಾರಂಭಕ್ಕೆ ಮುಂಚಿತವಾಗಿ ಭಾರತದಲ್ಲಿ ನೆಲೆಸಿದ್ದರು. ಅವರು ವಿದೇಶಿ ಪಾಸ್ಪೋರ್ಟ್ ಮತ್ತು ವಸತಿ ಪರವಾನಿಗೆ ಆಧಾರದ ಮೇಲೆ ಉಳಿದರು. ಅವರು ನಿವಾಸಿಗಳ ಮೂಲಕ ಪೌರತ್ವವನ್ನು ಪಡೆದುಕೊಳ್ಳಬಹುದೇ ?

Q. No. 3. a) What do you mean by 'Law' ? Explain the validity of pre-constitutional and post-constitutional laws. Marks : 10

ಕಾನೂನು ಎಂದರೇನು ? ಪೂರ್ವ ಸಾಂವಿಧಾನಿಕ ಮತ್ತು ನಂತರದ ಸಾಂವಿಧಾನಿಕ ಕಾನೂನುಗಳ ಸಿಂಧುತ್ವವನ್ನು ವಿವರಿಸಿ.

Q. No. 3. b) Write a short note on Judicial review power of High Courts and Supreme Court ? Marks : 6

ಉಚ್ಚ ನ್ಯಾಯಾಲಯಗಳ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ವಿಮರ್ಶೆ ಅಧಿಕಾರದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

Q. No. 4. a) Explain with the help of judicial interpretations the concept of equality as enshrined under Article 14 of the Indian Constitution. Marks : 10

ಭಾರತದ ಸಂವಿಧಾನದ ಅನುಚ್ಛೇದ 14ರ ಅಡಿಯಲ್ಲಿ ಸಮಾನತೆಯ ಪರಿಕಲ್ಪನೆಯನ್ನು ನ್ಯಾಯಾಂಗ ವ್ಯಾಖ್ಯಾನಗಳ ಸಹಾಯದಿಂದ ವಿವರಿಸಿ.

Q. No. 4. b) An Act was enacted by the Government impositing tax on the cinema houses with large seating accommodation and situated in busy and rich localities than on small cinema houses containing less seating accommodation and situated in poor localities. Is it a valid law ? Marks : 6

ಸರ್ಕಾರವು ಒಂದು ಕಾಯಿದೆ ಜಾರಿಗೊಳಿಸುವುದರ ಮೂಲಕ ಕಡಿಮೆ ಆಸನಗಳ ಸೌಕರ್ಯ ಮತ್ತು ಕಳಪೆ ಪ್ರದೇಶಗಳಲ್ಲಿ ನೆಲೆಗೊಂಡಿದ್ದ ಸಿನೆಮಾ ಮನೆಗಳಿಗಿಂತ ದೊಡ್ಡ ಆಸನಗಳ ಸೌಕರ್ಯ ಇರುವ ಮತ್ತು ಹೆಚ್ಚು ನಿರತ ಮತ್ತು ಶ್ರೀಮಂತ ಪ್ರದೇಶಗಳ ಸಿನೆಮಾ ಮನೆಗಳಿಗೆ ತೆರಿಗೆ ವಿಧಿಸಿತು. ಇದು ಮಾನ್ಯ ಕಾನೂನೇ ?

Q. No. 5. a) Explain the special provisions of social justice in order to protect women, children and backward classes under Article 15 of the Indian Constitution ? Marks : 10

ಭಾರತೀಯ ಸಂವಿಧಾನದ ಅನುಚ್ಛೇದ 15ರ ಅಡಿಯಲ್ಲಿ ಮಹಿಳಾ, ಮಕ್ಕಳ ಮತ್ತು ಹಿಂದುಳಿದ ವರ್ಗಗಳನ್ನು ರಕ್ಷಿಸಲು ಸಾಮಾಜಿಕ ನ್ಯಾಯದ ನಿಬಂಧನೆಗಳನ್ನು ವಿವರಿಸಿ.

Q. No. 5. b) Write a short note on 'Abolition of Untouchability'. Marks : 6

'ಅಸ್ಪೃಶ್ಯತೆಯ ನಿರ್ಮೂಲನೆ' ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 6. a) "All citizens shall have the right to practice any profession or to carry on any occupation, trade or business subject to reasonable restriction." – Comment. Marks : 10

"ಎಲ್ಲಾ ನಾಗರಿಕರು ಸಮಂಜಸವಾದ ನಿರ್ಬಂಧಕ್ಕೆ ಒಳಪಟ್ಟು ಯಾವುದೇ ವೃತ್ತಿಯನ್ನು ಮಾಡಲು ಅಥವಾ ಯಾವುದೇ ಉದ್ಯೋಗ ಅಥವಾ ವ್ಯವಹಾರ ಮಾಡಲು ಹಕ್ಕನ್ನು ಹೊಂದಿರುತ್ತಾರೆ." – ವಿಮರ್ಶಿಸಿ.

Q. No. 6. b) How far the ruling in Indra Sahney's case in respect of reservation in promotion is curtailed by 77$^{th}$ Amendment ? Explain. Marks : 6

ಇಂದ್ರ ಸಾಹ್ನಿ ಪ್ರಕರಣದ ಸೇವೆಯಲ್ಲಿನ ಬಡ್ತಿಗೆ ಮೀಸಲಾತಿ ಆದೇಶವನ್ನು 77ನೇ ತಿದ್ದುಪಡಿ ಎಷ್ಟರ ಮಟ್ಟಿಗೆ ಕಡಿತಗೊಳಿಸಿದೆ ? ವಿವರಿಸಿ.

Q. No. 7. a) Discuss the Constitutional protection available against arbitrary arrest and detention under Article 22 of the Indian Constitution. Marks : 10

ಭಾರತೀಯ ಸಂವಿಧಾನದ ಅನುಚ್ಛೇದ 22ರ ಅಡಿಯಲ್ಲಿ ಅನಿಯಂತ್ರಿತ ದಸ್ತಗಿರಿ ಮತ್ತು ಬಂಧನದಿಂದ ದೊರೆಯುವ ಸಂವಿಧಾನಾತ್ಮಕ ರಕ್ಷಣೆ ಕುರಿತು ಚರ್ಚಿಸಿ.

Q. No. 7. b) Whether right to die with dignity is a Fundamental Right ? Marks : 6

ಘನತೆಯಿಂದ ಸಾಯುವ ಹಕ್ಕು ಒಂದು ಮೂಲಭೂತ ಹಕ್ಕಾ ?

Q. No. 8. a) With reference to decided cases explain the scope of fundamental rights to freedom of religion under Indian Constitution and the restrictions on this right. Marks : 10

ನಿರ್ಧರಿಸಿದ ಪ್ರಕರಣಗಳ ಅಡಿಯಲ್ಲಿ ಭಾರತೀಯ ಸಂವಿಧಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ವ್ಯಾಪ್ತಿ ಮತ್ತು ಈ ಹಕ್ಕಿನ ಮೇಲೆ ಇರುವ ನಿರ್ಬಂಧಗಳನ್ನು ವಿವರಿಸಿ.

Q. No. 8. b) A company owned by the state made payment of wages lower than the minimum wages to the person employed after taking their services. Here, which Fundamental Right is violated ? Marks : 6

ರಾಜ್ಯ ಒಡೆತನದ ಕಂಪನಿಯು ಅವರ ಸೇವೆಗಳನ್ನು ತೆಗೆದುಕೊಂಡ ನಂತರ ಉದ್ಯೋಗಿಗಳಿಗೆ ಕನಿಷ್ಠ ವೇತನಕ್ಕಿಂತ ಕಡಿಮೆ ವೇತನವನ್ನು ಪಾವತಿಸಿತ್ತು. ಇಲ್ಲಿ ಯಾವ ಮೂಲಭೂತ ಹಕ್ಕನ್ನು ಉಲ್ಲಂಘಿಸಲಾಗಿದೆ ?

Q. No. 9. a) Discuss the cultural and educational rights of minorities under the Indian Constitution. Marks : 10

ಭಾರತೀಯ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಇರುವ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ಚರ್ಚಿಸಿ.

Q. No. 9. b) The supreme court expressed its opinion that the citizens should not come to the (supreme) court directly for the enforcement of Fundamental Rights, but they should first seek remedy in the high court and then if parties are dissatisfied with the judgement of High Court, can approach the Supreme Court by way of appeal. Can this attempt of Supreme Court to curtail the Fundamental Rights of citizens be justified ? Marks : 6

ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ನಾಗರಿಕರು ನೇರವಾಗಿ (ಸರ್ವೋಚ್ಚ) ನ್ಯಾಯಾಲಯಕ್ಕೆ ಬರಬಾರದು, ಆದರೆ ಅವರು ಮೊದಲು ಉಚ್ಚನ್ಯಾಯಾಲಯದಲ್ಲಿ ಪರಿಹಾರವನ್ನು ಪಡೆಯಬೇಕು ಮತ್ತು ಪಕ್ಷಗಳು ಉಚ್ಚನ್ಯಾಯಾಲಯದ ತೀರ್ಪಿನಿಂದ ಅತೃಪ್ತರಾಗಿದ್ದರೆ ಸರ್ವೋಚ್ಚ ನ್ಯಾಯಾಲಯವನ್ನು ಮೇಲ್ಮನವಿ ಮೂಲಕ ಸಂಪರ್ಕಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯ ತನ್ನ ಅಭಿಪ್ರಾಯ ವ್ಯಕ್ತಪಡಿಸಿತು. ನಾಗರಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಲು (ಸುಪ್ರೀಂ) ಸರ್ವೋಚ್ಚ ನ್ಯಾಯಾಲಯದ ಈ ಪ್ರಯತ್ನವನ್ನು ಸಮರ್ಥಿಸಬಹುದೇ ?

Q. No. 10. a) Explain the importance and scope of Directive Principles of State Policy. Marks : 10

ರಾಜ್ಯ ನಿರ್ದೇಶಕ ತತ್ವಗಳ ಮಹತ್ವ ಮತ್ತು ವ್ಯಾಪ್ತಿಯನ್ನು ವಿವರಿಸಿ.

Q. No. 10. b) Write a short note on 'Fundamental Duties'. Marks : 6

'ಮೂಲಭೂತ ಕರ್ತವ್ಯಗಳ' ಮೇಲೆ ಲಘು ಟಿಪ್ಪಣಿ ಬರೆಯಿರಿ.

**4001/7016/6016/5048**

**I Semester 3 Year LL.B./III Semester 5 Year B.Com. LL.B./III Semester 5 Year B.A. LL.B. (Maj.-Min.)/B.B.A. LL.B. Examination, December 2019**
**(2018 and 2019 Batch)**

# CONSTITUTIONAL LAW – I

Duration : 3 Hours Max. Marks : 80

**Instructions** : 1. Answer **all five** Units.

2. **One** essay type question and short note/problems is **compulsory** from **each** Unit.

3. Figures to the **right** indicate marks.

4. Answers should be written either in **English** or in **Kannada completely.**

## UNIT – I

Q. No. 1. a) Explain the salient features of Indian Constitution. Marks : 10
ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

OR

a) What is meant by citizenship ? Explain the mode of acquisition and termination of citizenship. Marks : 10

ಪೌರತ್ವದ ಅರ್ಥವೇನು ? ಪೌರತ್ವದ ಸ್ವಾಧೀನ ಮತ್ತು ಮುಕ್ತಾಯದ ವಿಧಾನಗಳನ್ನು ವಿವರಿಸಿ.

b) Write a note on 'Constitutionalism'. Marks : 6
'ಸಾಂವಿಧಾನಿಕತೆಯ' ಬಗ್ಗೆ ಟಿಪ್ಪಣಿ ಬರೆಯಿರಿ.

OR

b) Can preamble be amended ? Marks : 6
ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಬಹುದೇ ?

## UNIT – II

Q. No. 2. a) Define the term 'State'. Explain with the help of judicial decisions the need for widening the definition of 'State'. Marks : 10

'ರಾಜ್ಯ' ಪದವನ್ನು ವ್ಯಾಖ್ಯಾನಿಸಿ. ರಾಜ್ಯದ ವ್ಯಾಖ್ಯಾನವನ್ನು ವಿಸ್ತರಿಸುವ ಅಗತ್ಯವನ್ನು ನ್ಯಾಯಾಂಗ ನಿರ್ಧಾರಗಳ ಸಹಾಯದಿಂದ ವಿವರಿಸಿ.

OR

P.T.O.

a) 'Article 14 permits reasonable classification but prohibits class legislation'. Explain the test and grounds of classification with the help of decided cases. Marks : 10

'ಅನುಚ್ಛೇದ 14 ಸಮಂಜಸವಾದ ವರ್ಗೀಕರಣವನ್ನು ಅನುಮತಿಸುತ್ತದೆ ಆದರೆ ವರ್ಗ ಶಾಸನವನ್ನು ನಿಷೇಧಿಸುತ್ತದೆ'. ನಿರ್ಧರಿಸಿದ ಪ್ರಕರಣಗಳ ಸಹಾಯದಿಂದ ವರ್ಗೀಕರಣದ ಪರೀಕ್ಷೆ ಮತ್ತು ಆಧಾರಗಳನ್ನು ವಿವರಿಸಿ.

b) Write a note on 'Doctrine of Severability'. Marks : 6

'ಬೇರ್ಪಡಿಸುವ ಸಿದ್ಧಾಂತ'ದ ಬಗ್ಗೆ ಟಿಪ್ಪಣಿ ಬರೆಯಿರಿ.

OR

b) The State of Kerala imposed taxes on cooked food sold in the luxury hotels, but exempted from tax on food sold in modest eating houses. The object of imposing tax was to raise revenue by taxing on sale of costlier food in luxury hotels. This was challenged by the hotel and restaurant association as discriminatory and arbitrary. Will they succeed ? Marks : 6

ಕೇರಳ ರಾಜ್ಯವು ಐಷಾರಾಮಿ ಹೋಟೆಲ್ಗಳಲ್ಲಿ ಮಾರಾಟವಾದ ಬೇಯಿಸಿದ ಆಹಾರದ ಮೇಲೆ ತೆರಿಗೆ ವಿಧಿಸಿತು, ಆದರೆ ಸಾಧಾರಣ ತಿನ್ನುವ ಮನೆಗಳಲ್ಲಿ ಮಾರಾಟವಾಗುವ ಆಹಾರಗಳಿಗೆ ತೆರಿಗೆಯಿಂದ ವಿನಾಯಿತಿ ನೀಡಿತು. ಐಷಾರಾಮಿ ಹೋಟೆಲ್ಗಳಲ್ಲಿ ಬೆಲೆಬಾಳುವ ಆಹಾರದ ಮಾರಾಟದ ಮೇಲೆ ತೆರಿಗೆ ವಿಧಿಸಿ ಆದಾಯವನ್ನು ಹೆಚ್ಚಿಸುವುದು ಉದ್ದೇಶವಾಗಿತ್ತು. ಹೋಟೆಲ್ ಮತ್ತು ರೆಸ್ಟರಾಂಟ್ ಅಸೋಸಿಯೇಷನ್‌ಗಳು ತಾರತಮ್ಯ ಮತ್ತು ಅನಿಯಂತ್ರಿತವೆಂದು ಪ್ರಶ್ನಿಸಿದರು. ಅವರು ಯಶಸ್ವಿಯಾಗುತ್ತಾರೆಯೇ ?

## UNIT – III

Q. No. 3. a) Discuss the provisions of Article 16 of the Indian Constitution relating to opportunity for all citizens in matters of employment or appointment under the State. Marks : 10

ರಾಜ್ಯದ ಉದ್ಯೋಗ ಅಥವಾ ನೇಮಕಾತಿಯಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನ ಅವಕಾಶದ ಬಗ್ಗೆ ಭಾರತೀಯ ಸಂವಿಧಾನದ ಅನುಚ್ಛೇದ 16 ರ ನಿಬಂಧನೆಗಳನ್ನು ಚರ್ಚಿಸಿ.

OR

a) Explain the different dimensions of Freedom of Speech and Expression with the help of decided cases. Marks : 10

ನಿರ್ಧರಿಸಿದ ಪ್ರಕರಣಗಳ ಸಹಾಯದಿಂದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಭಿನ್ನ ಆಯಾಮಗಳನ್ನು ವಿವರಿಸಿ.

b) After due consideration and in order to provide employment opportunities to younger sections of the society, the Government, by passing Public Employment (Regulations of Conditions of Service) Act reduced the age of retirement of all Government employees from 60 to 58 years. This was challenged as violative of Article 14 of the Constitution. Decide. Marks : 6

ಕಾರಣ ಪರಿಗಣನೆಯ ನಂತರ ಮತ್ತು ಸಮಾಜದ ಕಿರಿಯ ವಿಭಾಗಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಸಲುವಾಗಿ ಸರ್ಕಾರವು ಸಾರ್ವಜನಿಕ ಉದ್ಯೋಗ (ಸೇವಾ ನಿಯಮಗಳ ನಿಯಂತ್ರಣ) ಕಾಯಿದೆ ಹಾದುಹೋಗುವ ಮೂಲಕ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 60 ರಿಂದ 58 ವರ್ಷಗಳಿಗೆ ಕಡಿಮೆ ಮಾಡಿತು. ಇದನ್ನು ಸಂವಿಧಾನದ 14ನೇ ವಿಧಿಯ ಉಲ್ಲಂಘನೆ ಎಂದು ಪ್ರಶ್ನಿಸಲಾಯಿತು. ತೀರ್ಮಾನಿಸಿ.

OR

b) Write a note on 'Constitutional Provisions on Untouchability'. Marks : 6

'ಅಸ್ಪೃಶ್ಯತೆಗೆ ಸಂವಿಧಾನಾತ್ಮಕ ನಿಬಂಧನೆಗಳು' ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – IV

Q. No. 4. a) "No person shall be deprived of his life or personal liberty except according to procedure established by law". Explain this statement with reference to various facets of life and liberty. Marks : 10

''ಕಾನೂನುಬದ್ಧ ಸುಸ್ಥಾಪಿತ ಪ್ರಕ್ರಿಯೆಗಳಿಗೆ ಅನುಗುಣವಾಗಿಯಲ್ಲದೆ, ಯಾವುದೇ ವ್ಯಕ್ತಿಯ ಜೀವ ಅಥವಾ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಲೋಪವನ್ನು ಉಂಟುಮಾಡತಕ್ಕದ್ದಲ್ಲ''. ಜೀವನ ಮತ್ತು ಸ್ವಾತಂತ್ರ್ಯದ ವಿವಿಧ ಅಂಶಗಳನ್ನು ಉಲ್ಲೇಖಿಸಿ ಈ ಹೇಳಿಕೆಯನ್ನು ವಿವರಿಸಿ.

OR

a) Explain the constitutional safeguards available to an accused person under the Indian Constitution. Marks : 10

ಭಾರತದ ಸಂವಿಧಾನದಲ್ಲಿ ಆಪಾದಿತನೊಬ್ಬನಿಗೆ ಲಭ್ಯವಿರುವ ಸಂವಿಧಾನಾತ್ಮಕ ರಕ್ಷಣೆಗಳನ್ನು ವಿವರಿಸಿ.

b) Write a note on "Preventive Detention Laws". Marks : 6

''ತಡೆಗಟ್ಟುವ ಬಂಧನ ಕಾನೂನುಗಳು'' ಮೇಲೆ ಟಿಪ್ಪಣಿ ಬರೆಯಿರಿ.

OR

b) An Athiest Society of India filed a writ of Mandamus praying for a direction to the State Government to prohibit breaking of coconuts, performing poojas, chanting of mantras or suras of different religions at state functions on the ground that India is a secular state and it has nothing to do with any religion. Can it succeed ? Marks : 6

ಭಾರತದ ಒಂದು ನಾಸ್ತಿಕ ಸಮಾಜ ಭಾರತವು ಒಂದು ಜಾತ್ಯಾತೀತ ರಾಜ್ಯ ಮತ್ತು ಇದಕ್ಕೆ ಯಾವುದೇ ಧರ್ಮದೊಂದಿಗೆ ಸಂಬಂಧವಿಲ್ಲ ಎಂಬ ಕಾರಣದ ಮೇಲೆ ರಾಜ್ಯ ಸರ್ಕಾರವು ರಾಜ್ಯ ಕಾರ್ಯಗಳಲ್ಲಿ ತೆಂಗಿನಕಾಯಿಗಳನ್ನು ಮುರಿಯುವುದು, ಪೂಜಾಗಳನ್ನು ಪ್ರದರ್ಶಿಸುವುದು, ವಿವಿಧ ಧರ್ಮದ ಮಂತ್ರಗಳನ್ನು ಅಥವಾ ಸೂರಗಳನ್ನು ಪಠಣ ಮಾಡುವುದನ್ನು ನಿಷೇಧಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ನಿರ್ದೇಶನ ಕೊಡಲು ಪ್ರಾರ್ಥಿಸುವ ಮೂಲಕ ಒಂದು ಮ್ಯಾಂಡಮಸ್ ರಿಟ್‌ನ್ನು ಸಲ್ಲಿಸಿತು. ಅದು ಯಶಸ್ವಿಯಾಗಬಹುದೇ ?

## UNIT – V

Q. No. 5. a) Explain the various types of writs contemplated under the Indian Constitution. Marks : 10

ಭಾರತದ ಸಂವಿಧಾನದಲ್ಲಿ ಪರಿಗಣಿಸಲ್ಪಟ್ಟ ವಿವಿಧ ರೀತಿಯ ರಿಟ್‌ಗಳನ್ನು ವಿವರಿಸಿ.

OR

a) Critically explain the controversy between the Fundamental Rights and Directive Principles of State Policy. Marks : 10

ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ನಡುವಿನ ವಿವಾದವನ್ನು ಟೀಕಾತ್ಮಕವಾಗಿ ವಿವರಿಸಿ.

b) Write a note on 'Right to Property Position prior to 1978 and present'. Marks : 6

'ಸ್ವತ್ತಿನ ಹಕ್ಕು : 1978ರ ಪೂರ್ವದಲ್ಲಿ ಮತ್ತು ಇಂದಿನವರೆಗೆ ಸ್ಥಾನ'ದ ಮೇಲೆ ಟಿಪ್ಪಣಿ ಬರೆಯಿರಿ.

OR

b) The Government of Mumbai issued an order banning admission of those candidates whose language was not English into schools having English as a medium of instruction. An educational society challenged the order on the ground that the Government denied admission solely on the ground of language. Can it succeed ? Marks : 6

ಆಂಗ್ಲ ಬೋಧನಾ ಮಾಧ್ಯಮ ಶಾಲೆಗಳಲ್ಲಿ ಆಂಗ್ಲ ಭಾಷೆಯಲ್ಲದ ಅಭ್ಯರ್ಥಿಗಳ ಪ್ರವೇಶವನ್ನು ನಿಷೇಧಿಸುವ ಆದೇಶವನ್ನು ಮುಂಬಯಿ ಸರ್ಕಾರವು ಜಾರಿಗೊಳಿಸಿತು. ಕೇವಲ ಭಾಷೆಯ ಆಧಾರದ ಮೇಲೆ ಪ್ರವೇಶವನ್ನು ಸರ್ಕಾರ ನಿರಾಕರಿಸಿದೆ ಎಂಬ ಕಾರಣದ ಮೇಲೆ ಒಂದು ಶೈಕ್ಷಣಿಕ ಸಂಸ್ಥೆ ಆದೇಶವನ್ನು ಪ್ರಶ್ನಿಸಿತು. ಅದು ಯಶಸ್ವಿಯಾಗಬಹುದೇ ?

# First Semester 3 Year LL.B. Examination, June/July 2019
## CONSTITUTIONAL LAW – I
## (2018 Batch)

Duration : 3 Hours | Max. Marks : 80

**Instructions :** 1. Answer **all five** Units.
2. **One** essay type question and short note/problem is **compulsory** from **each** Unit.
3. Figures to the **right** indicate marks.
4. Answer should be written either in **English** or **Kannada** completely.

UNIT – I

Q. No. 1. a) Examine the salient features of the Indian Constitution. Marks : 10
ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪರೀಕ್ಷಿಸಿ.

OR

a) Explain the objectives enshrined in the Preamble. Marks : 10
ಸಂವಿಧಾನದ ಪ್ರಸ್ತಾವನೆಯಲ್ಲಿ ಅಡಕವಾಗಿರುವ ಉದ್ದೇಶಗಳನ್ನು ವಿವರಿಸಿರಿ.

b) Can company or corporation be a citizen ? Marks : 6
ಒಂದು ಕಂಪನಿ ಅಥವಾ ಒಂದು ನಿಗಮವು ಒಬ್ಬ ಪ್ರಜೆ (ನಾಗರಿಕ) ಎಂದು ಪರಿಗಣಿಸಲ್ಪಡಬಹುದೇ ?

OR

b) 'A' had come to India in 1938. In 1945, he went on pilgrimage to Iraq. On return he was registered as a foreigner and several times his stay in India was extended, but in 1957 his request was refused. Can he compel the Government of India to grant him citizenship ? Marks : 6
'A' ಎಂಬುವವನು 1938 ರಲ್ಲಿ ಭಾರತಕ್ಕೆ ಬಂದಿದ್ದನು. 1945 ರಲ್ಲಿ ಇರಾಕಿಗೆ ಯಾತ್ರೆಗೆ ಹೋಗಿ ಬಂದ ನಂತರ ತಾನು ವಿದೇಶಿಯನು ಎಂದು ದಾಖಲು ಮಾಡಿಸಿದನು ಹಾಗೂ ಅನೇಕ ಸಾರಿ ಅವನು ಭಾರತದಲ್ಲಿ ವಾಸಿಸುವ ಬೇಡಿಕೆಯನ್ನು ಮುಂದುವರಿಸಲಾಗಿತ್ತು. ಆದರೆ 1957 ರಲ್ಲಿ ಅವನ ಬೇಡಿಕೆಯನ್ನು ನಿರಾಕರಿಸಲಾಯಿತು. ಅವನು ಭಾರತೀಯ ಪೌರನಾಗಲು ಒತ್ತಾಯಿಸಬಹುದೇ ?

## UNIT – II

Q. No. 2. a) Examine the scope of "other authorities" under Art. 12 of the Constitution. Marks : 10

ಸಂವಿಧಾನದ ಅನುಚ್ಛೇದ 12 ರಲ್ಲಿನ "ಇತರೆ ಪ್ರಾಧಿಕಾರಗಳು" ಎಂಬುದರ ವ್ಯಾಪ್ತಿಯನ್ನು ಪರಿಶೀಲಿಸಿ.

OR

a) Discuss the principles of equality as laid down under Art. 14 of the Indian Constitution. Marks : 10

ಭಾರತ ಸಂವಿಧಾನದಲ್ಲಿ ಅನುಚ್ಛೇದ 14 ರಲ್ಲಿ ಹೇಳಿರುವ ಸಮಾನತೆಯ ತತ್ವಗಳ ಬಗ್ಗೆ ಚರ್ಚಿಸಿರಿ.

b) "X" company was managing the spinning and weaving including the textile mill. On account of mis-management a situation has arisen to close down the mill. The action of the company, affected the production of essential commodities and caused unemployment. The parliament passed the 'X' company, Act which empowered the government to take over the control and management of the company. The Act was challenged by the shareholders of the company., on the ground that it violates Art. 14. Decide. Marks : 6

"X" ಎಂಬ ಕಂಪನಿಯು ನೂಲಿನ ಮತ್ತು ನೇಯುವ ಹಾಗೂ ನೇಯ್ದ ವಸ್ತುಗಳ ಮಿಲ್ಲಿನ ಆಡಳಿತ ಕಾರ್ಯಗಳನ್ನು ನಿರ್ವಹಿಸುತ್ತಲಿತ್ತು. ಅವ್ಯವಹಾರದಿಂದಾಗಿ ಕಂಪನಿಯು ಮುಚ್ಚುವ ಪರಿಸ್ಥಿತಿಯಲ್ಲಿ ಇತ್ತು. ಇದರಿಂದಾಗಿ ಬಟ್ಟೆ ತಯಾರಿಕೆಯ ಅಭಾವ ಮತ್ತು ಭೀಕರ ನಿರುದ್ಯೋಗ ತಲೆದೋರುವ ಸ್ಥಿತಿಯಲ್ಲಿತ್ತು. ಇದರಿಂದಾಗಿ ಸಂಸತ್ತು "X" ಕಂಪನಿ ಕಾಯ್ದೆಯನ್ನು ಜಾರಿಗೊಳಿಸಿ ಕಂಪನಿಯನ್ನು ಸರಕಾರದ ವಶಕ್ಕೆ ತೆಗೆದುಕೊಂಡಿತು. ಕಂಪನಿಯ ಶೇರುದಾರರು ಸರ್ಕಾರ ತೆಗೆದುಕೊಂಡ ಕ್ರಮವು ಸಂವಿಧಾನದ ಅನುಚ್ಛೇದ 14 ರ ಉಲ್ಲಂಘನೆಯಾಗಿದೆ ಎಂದು ಪ್ರಶ್ನಿಸಿದ್ದಾರೆ. ತೀರ್ಮಾನಿಸಿ.

OR

b) Write a note on "Doctrine of Severability". Marks : 6

"ಪ್ರತ್ಯೇಕತಾ ಸಿದ್ಧಾಂತ"ದ ಮೇಲೆ ಟಿಪ್ಪಣಿ ಬರೆಯಿರಿ.

## UNIT – III

Q. No. 3. a) "Art. 15(4) permits special provisions for the advancement of socially and educationally backward classes of citizens". Discuss the validity of this statement with reference to decided cases. Marks : 10

"ಅನುಚ್ಛೇದ 15(4) ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪೌರವರ್ಗಗಳ ಅಭಿವೃದ್ಧಿಗಾಗಿ ವಿಶೇಷ ಶಾಸನ ರಚಿಸಲು ಅವಕಾಶ ಮಾಡಿಕೊಡುತ್ತದೆ" ತೀರ್ಮಾನಿತವಾದ ಪ್ರಕರಣಗಳೊಂದಿಗೆ ಈ ಹೇಳಿಕೆಯ ನೈಜತೆಯನ್ನು ಚರ್ಚಿಸಿ.

OR

a) Discuss the right to freedom of speech and expression with the help of decided cases. Marks : 10

ವಾಕ್ ಸ್ವಾತಂತ್ರ್ಯದ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನಿರ್ಣಯಿಸಿದ ತೀರ್ಮಾನಗಳ ಮೂಲಕ ಚರ್ಚಿಸಿರಿ.

b) A citizen refuses to sing the National Anthem. Can he be compelled to sing ? Marks : 6

ಒಬ್ಬ ಪೌರನು ರಾಷ್ಟ್ರಗೀತೆಯನ್ನು ಹಾಡಲು ನಿರಾಕರಿಸುತ್ತಾನೆ. ಅವನನ್ನು ಹಾಡಲು ಒತ್ತಾಯಿಸಬಹುದೇ ?

OR

b) A Muslim woman challenges her personal law regarding Talaq (Divorce) and polygamy on the ground of discrimination only on the grounds of Sex. Decide. Marks : 6

ಕೇವಲ ಲಿಂಗದ ತಳಹದಿಯ ಮೇಲೆ ಪಕ್ಷಪಾತ ಮಾಡುವ ತನ್ನ ವೈಯಕ್ತಿಕ ಕಾನೂನಿನ ತಲಾಕ್ (ವಿಚ್ಛೇದನ) ಮತ್ತು ಬಹುಪತ್ನಿತ್ವವನ್ನು ಓರ್ವ ಮಹಮ್ಮದೀಯ ಮಹಿಳೆಯು (ನ್ಯಾಯಾಲಯದಲ್ಲಿ) ಪ್ರಶ್ನಿಸುವಳು. ತೀರ್ಮಾನಿಸಿರಿ.

## UNIT – IV

Q. No. 4. a) "No person shall be deprived of his life or personal liberty except according to procedure established by law". Comment. Marks : 10

"ಯಾವುದೇ ವ್ಯಕ್ತಿಯ ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕಾನೂನಿನ ನಿರ್ಧರಿತ ಕ್ರಮಾನುಸಾರ ಹೊರತಾಗಿ ತೆಗೆದುಕೊಳ್ಳಲಾಗದು". ಟೀಕಿಸಿ.

OR

a) Examine the scope of the right to freedom of religion under the Indian Constitution. Marks : 10

ಭಾರತದ ಸಂವಿಧಾನದಲ್ಲಿ ಮತ ಸ್ವಾತಂತ್ರ್ಯದ ಹಕ್ಕಿನ ವ್ಯಾಪ್ತಿಯನ್ನು ಪರೀಕ್ಷಿಸಿರಿ.

b) A State proposes to pass law requiring the Archakas of a temple to conduct worship in the Vernacular language instead of Sanskrit. Is it a valid law ? Marks : 6

ಒಂದು ರಾಜ್ಯವು ತನ್ನ ರಾಜ್ಯದಲ್ಲಿರುವ ದೇವಾಲಯಗಳ ಅರ್ಚಕರು ಸಂಸ್ಕೃತದ ಬದಲಾಗಿ ಪ್ರಾದೇಶಿಕ ಭಾಷೆಗಳಲ್ಲೇ ಪೂಜೆ ನೆರವೇರಿಸಬೇಕೆಂಬ ಕಾಯಿದೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾಪ ಮಾಡುತ್ತದೆ. ಪ್ರಸ್ತಾಪಿಸಲಾದ ಕಾನೂನು ಸಿಂಧುವೇ ?

OR

b) Authorities have refused to issue passport to 'A', a citizen of India to go abroad. Can the authorities be compelled to issue ? Marks : 6

ಪ್ರಾಧಿಕಾರವು 'ಎ' ಎಂಬ ಭಾರತೀಯ ನಾಗರಿಕನಿಗೆ ವಿದೇಶ ಪ್ರವಾಸ ಪತ್ರವನ್ನು ನಿರಾಕರಿಸಿದೆ. ಪ್ರಾಧಿಕಾರವು ಈ ಪತ್ರವನ್ನು ನೀಡಲೇಬೇಕೆಂದು ಒತ್ತಾಯಿಸಬಹುದೇ ?

## UNIT – V

Q. No. 5. a) Examine the significance of Directive Principles of State Policy. Marks : 10

ರಾಜ್ಯ ನಿರ್ದೇಶಕ ತತ್ವಗಳ ಪ್ರಾಮುಖ್ಯತೆಯನ್ನು ಪರೀಕ್ಷಿಸಿ.

OR

a) State the nature and scope of rights of minorities to establish and administer educational institutions. Marks : 10

ಅಲ್ಪಸಂಖ್ಯಾತರಿಗೆ ಲಭ್ಯವಿರುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ನಿರ್ವಹಣೆಯ ಹಕ್ಕಿನ ಸ್ವರೂಪ ಹಾಗೂ ಮೇರೆಯನ್ನು ಹೇಳಿರಿ.

b) Fundamental duties. Marks : 6

ಮೂಲಭೂತ ಕರ್ತವ್ಯಗಳು.

OR

b) Write a note on Habeas Corpus. Marks : 6

ಟಿಪ್ಪಣಿ ಬರೆಯಿರಿ – ಹೆಬಿಯಸ್ ಕಾರ್ಪಸ್ ರಿಟ್.

---